ಅಪ್ಪನೂರಿನ ಸಹವಾಸ ಬಿಟ್ಟಿದ್ದ ಅವನಮ್ಮ ಹೋಲ್‌ಸೇಲ್ ತರಕಾರಿ ಖರೀದಿ ರೀಟೇಲ್ ತರಕಾರಿ ಮಾರಾಟದ ನಡುವಿನ ಖಾಲಿ ಸಮಯದಲ್ಲಿ ಏನು ಮಾಡುತ್ತಾಳೆ ಅನ್ನುವ ಪ್ರಶ್ನೆ ಅನುಮಾನ ರೂಪ ತಾಳಿ ಅವನ ಪ್ರತಿಕ್ಷಣ ಕುಟುಕತೊಡಗಿತ್ತು. ಮನೆಯಲ್ಲಿ ಎಲ್ಲಿಂದಲೋ ಸಾಮಾನುಗಳು ಬರತೊಡಗಿದ್ದವು. ಹುಡುಕಿದ ಡಬ್ಬಿಗಳಲ್ಲೆಲ್ಲ ಹತ್ತಿಪ್ಪತ್ತು ರೂಪಾಯಿ ಸಿಗತೊಡಗಿತ್ತು. ಅಮ್ಮನ ಈ 'ದುಡಿಮೆ' ಎಂಥದ್ದು – ಹುಳ ಕೊರೆಯತೊಡಗಿತ್ತು. ಅಂದುಕೊಂಡದ್ದು ಸತ್ಯವಾದರೆ... ಎನ್ನುವ ಭಯ ಅವನ ಪರೀಕ್ಷಿಸದಂತೆ ತಡೆದುನಿಲ್ಲಿಸಿತ್ತು.

ಅವಳು ಎರಡು ಸತತ ದಿನ, ಇವನು ಹೊರಬಿದ್ದ ಒಂದೆರೆಡು ಗಂಟೆಗಳಲ್ಲಿ ಯಾರನ್ನೋ ಮನೆಯೊಳಗೆ ಕರೆದೊಯ್ದು ಬಾಗಿಲನ್ನಷ್ಟೇ ಅಲ್ಲದೇ ಎಲ್ಲ ಕಿಟಕಿಗಳನ್ನೂ ಹಾಕಿಬಿಡುತ್ತಿದ್ದುದು ಗಮನಿಸಿದ್ದ. ಏನು ನಡೆಯುತ್ತಿದೆ ಪತ್ತೆ ಹಚ್ಚುವ ಹೊತ್ತಿಗೆ ತಿಂಗಳು ಸವೆದಿತ್ತು. ಕಳ್ಳಬಸಿರನ್ನು ಇಳಿಸುವ ಕೆಲಸವನ್ನು ರವಿಕಾಂತನ ತಾಯಿ ಹೇಗೋ ಕರಗತ ಮಾಡಿಕೊಂಡುಬಿಟ್ಟಿದ್ದಳು. ಬೇಡದ್ದು ಇಳಿಸಿ ನಿರಾಳವಾದವರು ಎಲೆಯಡಿಕೆ ಜೊತೆ ನೂರೈವತ್ತೊಂದು ರೂಪಾಯಿ ಕೊಟ್ಟು ಹೋಗುತ್ತಿದ್ದರು. ಕೆಲವರು ಕಾಳುಕಡಿ, ಕೆಲವರು ರವಿಕೆ ಪೀಸು. ಅದೂ ಅವನಮ್ಮನ ಖಾಸಗಿ ರೀಟೇಲ್ ವ್ಯಾಪಾರದ ವಸ್ತುವಾಗಿ ಹೋಯ್ತು. ಅವನು ಕದ್ದು ಕಬ್ಬಿಣ ಮಾರಿದ, ಇವಳು ಕದ್ದು ಬಸಿರಾದವರ ಬಸಿರು ಇಳಿಸಿದಳು.

> ಉಂಡುತಿನ್ನಲು ಹೆದರುವ ಕಾಲ ಒಮ್ಮೆಲೆ ಮಾಯವಾಗಿ, ಹತ್ತಾರು ಟಾಕೀಸುಗಳು ವಾರಕ್ಕೊಮ್ಮೆ ರಂಜನೆ ಕೊಡತೊಡಗಿದವು. ಲಗ್ನ, ಲಗ್ನ, ಲಗ್ನ ಅಂತಾ ದುಂಬಾಲು ಬಿದ್ದ ಅಮ್ಮ–ದೊಡ್ಡಮ್ಮ ಕುಲಸ್ಥರೊಳಗೆ ರಾಜಮ್ಮ ಅನ್ನುವ ಸಾಮಾನ್ಯ ಸೌಂದರ್ಯದ ಲವಲವಿಕೆ ಸೊರಗಿರುವ ಹುಡುಗಿಯನ್ನು ಕಟ್ಟಿದರು.

ಒಂದಿನ ಅವನು ಊಟಕ್ಕೆ ಕೂತಾಗ ಅವಳೇ ಮಾತು ಹರಿಯಬಿಟ್ಟಿದ್ದಳು. 'ನಿನ್ನ ಮುತ್ತಜ್ಜಿಯಂಗೆ ನನ್ ಕೈನಾಗಿಂದ ದ್ಯಾವ್ರು ನಾಟಿ ಔಸ್ದಿ ಮಾಡ್ಸಾಕತ್ತಾನೆ ಕಣೊ... ಹಂಗಾಗೆ ತಿಂಗಳೊಪ್ಪತ್ತಿಗೆ ಹಿಟ್ಟಿಗೆ ದುಡ್ಡಾಗ್ತಿರೋದು. ಜನ ನಂಬಿದಾರೆ. ನಡೀತೈತೆ. ಯಾವಾಗ ನಿಂದ್ರುತತೋ ಗೊತ್ತಿಲ್ಲ. ನೀನು ಕೆಬ್ಬಣ–ಜಂಗು ಮಾರೋದು ಬಿಟ್ಟು ಕಿರಾಣಿ ಅಂಗಡಿ ಹಾಕು. ನಿಮ್ಮಪ್ಪನಪ್ಪ ಸಿದ್ದಬಸಪ್ಪ ಸಾಯಂಗಾಗ್ಯಾನೆ, ಏನಾದ್ರು ಇಸ್ಕಂಬರಾಣ. ಹಿಂಗೇ ಇದ್ರೆ ಆಗಲ್ಲ...' ಅಂದಿದ್ದಳು. ತಾನು ಓದಿ ದೊಡ್ಡೋನಾಗಲಿಲ್ಲ, ಇವಳು ಓದದೆಯೇ ದೊಡ್ಡೋಳಾಗೋಕೆ ಹೊಂಟಾಳಲ್ಲ... ಅನ್ನಿಸಿತ್ತವನಿಗೆ.

ಜನರಿಗೆ ನಿದ್ರೆ ಬರೋದನ್ನೇ ಕಾದು, ತಾನು ನಿದ್ರೆಗೆಟ್ಟು, ನಾಯಿಗಳ ಕಾಟದಿಂದ ತಪ್ಪಿಸಿ ಕದಿಯೋದು, ಕದ್ದಿದ್ದನ್ನು ಬಚ್ಚಿಡೋದು, ಬಚ್ಚಿಟ್ಟಿದ್ದನ್ನು ಅತಿ ಕಡಿಮೆ ಬೆಲೆಗೆ ಮಾರೋದು... ಕ್ರಮೇಣ ತಿಕ್ಕಲು ಮೂಡಿಸತೊಡಗಿತ್ತು. ಅಮ್ಮನ ಕಿರಾಣಿ ಅಂಗಡಿಯ ನೊಣಹೊಡೆಯುವ ಕೆಲಸ ಮೈಯೇರಿಬಿಟ್ಟರೆ ಎಂಬ ಹಪಹಪಿಗೆ ರೇಡಿಯೊ, ಟೇಪ್‌ರೆಕಾರ್ಡರು ರಿಪೇರಿಗೆ ಇಳಿದ.

ಬದುಕು ಜೋಳದ ಮುದ್ದೆ ಮುಳಗಾಯಿ ಚಟ್ನಿ ಅಷ್ಟೇ ಆಗಿ ಹೋಗುತ್ತಿದ್ದಾಗ ಒಂದು ದಿನ ನಾಜೀಮಾ 'ರವಿ ನಿಮ್ಮನೇಲಿ ಕರೆಂಟ್ ಐತಾ?...' ಅಂತ ಹಿಡಿದು ನಿಲ್ಲಿಸಿ ಮಾತನಾಡಿಸಿದ್ದಳು. ಕರೆಂಟು ದೇಹದಲ್ಲೇ ಇರುತ್ತೆ ಅಂತಾ ಆ ಕ್ಷಣ ಗೊತ್ತುಮಾಡಿಕೊಂಡಿದ್ದವನು, ಅವಳ ಮನೆಯ ಫ್ಯೂಸ್ ಸರಿ ಮಾಡಿಕೊಡುವ ಕೆಲಸದಲ್ಲಿ ತನ್ನ ಸೌಂದರ್ಯೋಪಾಸಕ ಗುಣಧರ್ಮದ ಚಾಪ್ಪರನ್ನು